## ಪ್ರಾರ್ಥನಾ ಮನವಿ

1. ಯೌವನಸ್ಥರ ಹೃದಯಗಳನ್ನು ಹಿಡಿಯುವಂತೆ ಬಹು ತೀವ್ರವಾಗಿ ಹಬ್ಬಿ ಬರುತ್ತಿರುವ ಎಲ್ಲಾ ಜಾಲತಾಣ ಆಟಗಳು ನಿಲ್ಲುವಂತೆಯೂ, ದೇಶದಲ್ಲಿ ಇದಕ್ಕಾಗಿ ಕಾನೂನುಗಳು ಜಾಡಿಗೊಂಡು ಇವುಗಳು ತಡೆಮಾಡಲ್ಪಡುವಂತೆಯೂ ಪ್ರಾರ್ಥಿಸಿರಿ.

2. ಭಯಂಕರವಾದ ಜಾಲತಾಣದ ಆಟಗಳಿಂದ ಮನಸ್ಸು ವಂಚನೆಗೊಳಪಟ್ಟು, ದುಷ್ಟತ್ವಕ್ಕೆ ಒಳಪಡುವ ಯುವ ತಲೆಮಾರು ಎದ್ದೇಳದ್ದಂತೆ ಗೋಳಾಡಿ ಪ್ರಾರ್ಥಿಸಿರಿ.

3. ಮನದೃಷ್ಟಿ ಅಂಧಗೊಂಡ ಯೌವನಸ್ಥರಿಂದ ಸಮಾಜದಲ್ಲಿ ಕೊಲೆಗಳು, ವ್ಯಭಿಚಾರಗಳು, ಆತ್ಮಹತ್ಯೆಗಳಂತಹ ಕೇಡುಗಳು ಹಬ್ಬದಂತೆ ಪ್ರಾರ್ಥಿಸಿರಿ.

4. ಯೌವನಸ್ಥರಿಗೆ ವಿರೋಧವಾಗಿ ಕಾರ್ಯಮಾಡುವ ಇಚ್ಚೆಗಳನ್ನು, ದೇಶದಲ್ಲಿ ಹೇರಳವಾಗಿ ಹಬ್ಬಿಸುವಂತೆ ಹೊರಟಿರುವ ಪಾತಾಳದ ಆತ್ಮಗವಾದ ಧೂಮಾಷ್ ಎಂಬ ಆತ್ಮದ ಸಕಲ ಕೃತ್ತಗಳು ಕಟ್ಟಲ್ಪಡುವಂತೆಯೂ, ಇಂತಹ ವಂಚಿಸುವ ಆತ್ಮಗಳು ದೇಶವನ್ನು ಬಿಟ್ಟು ಹಟ್ಟಲ್ಪಡುವಂತೆಯೂ ಪ್ರಾರ್ಥಿಸಿರಿ.

## ಪ್ರಾರ್ಥನೆ ಮಾಡಲು ಇಚ್ಛಿಸುತ್ತೀರಾ?

ಇಚಿತಹ ಪ್ರವಾದನೆಗಳಿಗೆ ಪ್ರಾರ್ಥಿಸಲು ಇಚ್ಚಿಸುತ್ತೀರಾ? ಹಾಗಾದರೆ ಈ ಕೆಳಕಂಡ ನಮ್ಮ ದೂರವಾಣಿ ಸಂಖ್ಯೆಗಳಿಗೆ ಯಾವುದಾದರೂ ಒಂದಕ್ಕೆ ಮಿಸ್ಡ್ ಕಾಲ್ ಕೊಡಿರಿ. ನಮ್ಮ ಸೇವಕರು ನಿಮ್ಮೊಂದಿಗೆ ಸಂಪರ್ಕಗೊಂಡು ನೀವು ಪ್ರಾರ್ಥಿಸುವದಕ್ಕಾಗಿ ಪ್ರವಾದನೆಗಳನ್ನು ನಮ್ಮಿಂದ ಹೊಂದಿಕೊಳ್ಳಲು ನಿಮಗೆ ಸಹಾಯ ಮಾಡುವರು.

0091/KAN/2019/0002

prophetic propagators mission

MADURAI 9488987770
CHENNAI 9600001844
BANGALORE 8095772333
propagators@vojmedia.com



ದೇವರು ಪ್ರಕಟಿಸಿದ ಪ್ರವಾದನೆ

# ಯೌವನಸ್ಥರುಗಳಿಗಾಗಿ..

### ಯೌವನಸ್ಥರ ಬಗ್ಗೆ ದೇವರು ನುಡಿದ ಮಾತು:

ಈ ವರ್ಷದಲ್ಲಿ ದೇವರು ಮುಂಬರುವ ದಿನಗಳಲ್ಲಿ ಯೌನವಸ್ಥರ ನಡುವೆ ಉಂಟಾಗುವ ಕೆಲವು ಕೇಡುಕುಗಳ ಬಗ್ಗೆ ಮುನ್ಸೂಚನೆಯಾಗಿ ಎಚ್ಚರಿಸಿ ತಿಳಿಸಿದಂತ ಮಾತುಗಳನ್ನು ತಿಳಿದುಕೊಂಡು ಯೌವನಸ್ಥರ ರಕ್ಷಣೆಗಾಗಿ ಪ್ರಾರ್ಥಿಸು-ವದಕ್ಕಾಗಿಯೇ ಈ ಕರಪತ್ರವನ್ನು ಪ್ರಕಟಿಸಲ್ಪಟ್ಟಿದೆ. ದೇವರು ನುಡಿದ ಮಾತುಗಳನ್ನು ಸಂಕ್ಷಿಪ್ತವಾಗಿ ಓದಿ ತಿಳಿದುಕೊಂಡು ಅದಕ್ಕಾಗಿ ಪ್ರಾರ್ಥಿಸಿರಿ.

ಈ ಪ್ರವಾದನ ನುಡಿಯೂ 02.01.2019 ರಲ್ಲಿ ದೇವರು ಸಹೋ. ವಿನ್ಸೆಂಟ್ ಸೆಲ್ವಕುಮಾರ್ ಅವರಿಗೆ ಪ್ರಕಟಿಸಿ ತಿಳಿಸಿದಂತದ್ದು:

# ದೇವರು ಪ್ರಕಟಿಸಿದ ಪ್ರವಾದನೆ

ಆಟಗಳಿಗೆ ಮಾರಲ್ಪಡುವ ಯೌವನಸ್ಥರು ಎದ್ದೇಳಲಿದ್ದಾರೆ. 24 ತಾಸ್ಸು ಆಟಗಳ ಹಿಂದೆ ಅವರು ಕಣ್ಣೆಟ್ಟು ಓಡುವವರಾಗಿದ್ದಾರೆ. ಇದು ಅವರ ಮನಸ್ಸನ್ನು ಅತಿಕ್ರಮಿಸುವದರಿಂದ ಅಮಲಿನಲ್ಲಿ ಅಲೆದಾಡುವವರಂತೆ ಬದಲಾಗಲಿದ್ದಾರೆ.

ಹಗಲು ರಾತ್ರಿಯೆನ್ನದೆ, ಅದರಲ್ಲಿ ಇವರು ಅತ್ಯಾಸಕ್ತಿಯನ್ನು ವಹಿಸುವರು. ಇದರ ನಿಮಿತ ಅನೇಕ ಯೌವನಸ್ಥರು ಮನೋತೋಚ ದವರಾಗಿ, ಮನಸ್ಥಿತಿ ಹದಗೆಟ್ಟು, ಯಾವುದೋ ಒಂದನ್ನು ಬಹು ತೀವ್ರವಾಗಿ ಹುಡುಕುವವರಂತೆ, ತಮ್ಮ ಭವಿಷ್ಯದ ಬಗ್ಗೆ ಚಿಂತೆಯಿಲ್ಲದವರಾಗಿ, ತಾವು ಮಾಡುತ್ತಿರುವಂತದ್ದೇನೆಂದು ಅರಿಯದವರಾಗಿ ಇದ್ದಕ್ಕಿಂದಂತೆ ಊಹಿಸಲು ಆಗದಂತೆ ಕೃತ್ಯವನ್ನು ಸಮಾಜದಲ್ಲಿ ಎಸಗಿಬಿಡುತ್ತಾರೆ. ಊಹಿಸಲೇ ಸಾಧ್ಯವಾಗದಂತ ಕೇಡಗಳನ್ನೂ, ಅಪತ್ತಾದ ಕಾರ್ಯಗಳನ್ನೂ ನಡೆಸಿ ಬಿಡುತ್ತಾರೆ. ಕೊಲೆಮಾಡುವವರಾಗಿಯೂ, ಹುಚ್ಚರಾಗಿಯೂ, ಬೇರೆಯವರಿಗೆ ಕೇಡು ಮಾಡಿ ಅದರಿಂದ ಸುಖವನ್ನು ಅನುಭವಿಸುವಂತವರಾಗಿಯೂ ಇವರು ಬದಲಾಗಿಬಿಡುತ್ತಾರೆ. ತಾಯಿಯನ್ನು ಕೊಲೆಮಾಡುವವರಾಗಿಯೂ, ತಂದೆಯನ್ನು ಹೊಡೆಯುವವನಾಗಿಯೂ, ತನ್ನ ಸಹೋದರಿಯನ್ನು ಮಾನಭಂಗಮಾಡುವವನಾಗಿಯೂ, ಶಾರೀರಿಕ ಇಚ್ಚೆಯಿಂದಲೂ, ಮಕ್ಕಳನ್ನು ಕೊಲೆಮಾಡುವವನಾಗಿಯೂ, ಅವರನ್ನು ಕೆಡಿಸುವಂತಹ ಕೃತ್ಯವೆಸಗುವ ಬಹುಜನ ಈ ಮೂಲಕ ಎದ್ದೇಳುವರು.

ಇದರ ನಿಮಿತ ದೇಶದಲ್ಲಿ ಸೈತಾನನ ಅಲೆಯು, ಆಟೋಟಗಳ ನಿಮಿತ ಬಹು ತೀವ್ರವಾಗಿ ಹಾದುಬರುತ್ತದೆ. ಅದು ಯುವಕರನ್ನೂ, ತನಗೆ ಅಧೀನವಾಗುವ ಎಲ್ಲರನ್ನೂ, ಹಿಡಿದುಕೊಳ್ಳುತ್ತದೆ. ಬಹು ದೇಶಗಳನ್ನು ಅದು ತನ್ನ ಹತೋಟಿಯಲ್ಲಿಟ್ಟುಕೊಳ್ಳುತ್ತದೆ. ಭಾರತದಲ್ಲಿ ಇದು ಮುಖ್ಯವಾಗಿ ಅನೇಕ ಯೌನಸ್ಥರನ್ನೂ, ಯೌನಸ್ತ್ರೀಯರನ್ನೂ, ಹಿಡಿಯುವಂತದ್ದಾಗಿದೆ. ಬಹುಜನರನ್ನು ಇದು ಹಿಡಿದುಕೊಳ್ಳುತ್ತದೆ. ಅವರ ಮನಸ್ಥಿತಿಯನ್ನು ಆಳುತ್ತದೆ. ಅದರ ಹಿಂದೆ ಓಡುತ್ತಾ, ಅದರ ವಂಚನೆಗೆ ಒಳಪಡುವಂತ ಯಾರಾದರೂ ಸರಿ ತನ್ನ ಜೀವವನ್ನು ಕಳಕೊಳ್ಳುವಂತೆ ಅದು ಕಾರ್ಯಮಾಡುತ್ತದೆ. ಇದರ ಹಿಡಿತದಲ್ಲಿ ಸಿಕ್ಕಿಕೊಳ್ಳುವಂತ ಪ್ರತಿಯೊಬ್ಬನೂ ತನ್ನ ಮನಸ್ಸಿನರಾಜ್ಯದಲ್ಲಿ ಸ್ತಬ್ದಗೊಂಡವನಾಗಿಯೂ, ಶೂನ್ಯ ಸ್ಥಿತಿಯಿಂದ ತನ್ನ ಮನದಲ್ಲಿ ಯೋಚಿಸಿ ಯೋಚಿಸಿ ಇದ್ದಕ್ಕಿದ್ದಂತೆ ಹುಚ್ಚು ಹಿಡಿದವನಾಗಿ ಕೇಡಿನ ಕಾರ್ಯಗಳನ್ನು ಎಸಗಿಬಿಡುತ್ತಾನೆ. ನೀವು ನಂಬಲು ಸಾಧ್ಯವಾಗದಂತ ಕ್ರಿಮಿನಲ್ ಕಾರ್ಯಗಳಲ್ಲಿ ಇವರು ನುಸುಳಿ ಬಹುಜನರ ನಾಶನಕ್ಕೆ ಕಾರಣವಾಗುತ್ತಾರೆ. ಇದು ಬಹುತೀವ್ರವಾಗಿ ಹರಡಿಕೊಳ್ಳುವ ಕಾಲದಲ್ಲಿ ಇದು ಬಹು ದೇಶಗಳಲ್ಲಿ ಹತೋಟಿಗೆ ತರಲಾಗದಂತ ಸಂಭವವಾಗಿ ಉದ್ಭವಿಸುತ್ತದೆ. ದೇಶದ ನಡುವೆ ಇದು ಮುಖ್ಯ ಆಡಿಕೆಯ ಮಾತಾಗಿ ಮಾರ್ಪಡುತ್ತದೆ.

ಮತ್ತೂ ಸ್ವಲ್ಪಕಾಲವಾಗಿ ಬಲಹೀನಗೊಂಡಿದ್ದ ಧೂಮಾಷ್ ಆತ್ಮವು ಮತ್ತೇ ಎದ್ದೇಳುವಂತದ್ದನ್ನು ನಾನು ನೋಡುತ್ತಿದ್ದೇನೆ. ವಿಧವಿಧವಾದ ಶಿಲೆಗಳಿಂದಲೂ, ನಿರಂತರವಾದ

## ಯೌವನಸ್ಥರಿಗೆ ವಿರುದ್ಧವಾಗಿ ಎದ್ದೇಳುವ ದುಷ್ಟ ಆತ್ಮ

ವಿಗ್ರಹಗಳಿಂದಲೂ ದೇಶವನ್ನು ತುಂಬಲಿದ್ದಾರೆ. ಈ ಆತ್ಮವು ಜನರ ನಡುವೆಯೂ, ದೇಶದ ನಡುವೆಯೂ, ಗೊಂದಲಗಳನ್ನುಂಟುಮಾಡುತ್ತದೆ. ನಕಲಿ ಜ್ಞಾನವೆಂದು ಅರ್ಥಮಾಡಿಕೊಳ್ಳುವ ಜ್ಞಾನದಿಂದ ತುಂಬಿ ಎದ್ದೇಳುವ ಜ್ಞಾನಿಗಳನ್ನು ಇಂತವರನ್ನು ಕಟ್ಟಿಹಾಕುವ ಈ ಆತ್ಮ, ಮುಂಬರುವ ಕಾಲಗಳಲ್ಲಿ ಮುಖ್ಯವಾಗಿ ಯುವಕರನ್ನು ಗುರಿಮಾಡಿ ಕ್ರಿಯೇಮಾಡುತ್ತದೆ. ಯುವಕರನ್ನು ಯೌವನದ ಇಚ್ಛೆಗಳಿಗೆ ಒಳಪಡಿಸಿ, ತಾವು ಮಾಡುವಂತದ್ದು ಏನೆಂಬುದು ಗೊತ್ತಿಲ್ಲದಂತ ಮನಸ್ಸಿನಿಂದ ಅವರನ್ನು ಹುಚ್ಚುಹಿಡಿಸುತ್ತದೆ.

ಅನೈತಿಕ ಸಂಬಂಧಗಳಿಂದಲೂ, ಇಚ್ಛೆಗಳಿಂದಲೂ, ಯುವಕರ ಮನಸ್ಸನ್ನು ಪ್ರೇರೇಪಿಸುವದರಿಂದಲೂ, ಶರೀರವನ್ನು ಭೇಟಿಯಾಡುವ, ಶರೀರವನ್ನು ಛಿದ್ರಗೊಳಿಸಿ ಕೊಲೆಮಾಡುವ, ವಿಧವಿಧವಾದ ಯೌವನದ ಇಚ್ಛೆಗಳನ್ನು ಪ್ರಸ್ತುತಪಡಿಸುವ ಯುವಕರೂ, ಯುವತಿಯರೂ ಹೇರಳವಾಗಿ ಎದ್ದೇಳುತ್ತಾರೆ. ಇದು ಅನೈತಿಕ ಸಂಬಂಧಗಳನ್ನು ಮನದಲ್ಲಿ ಉಂಟುಮಾಡುವದರಿಂದಲೂ, ಅದನ್ನು ಹಬ್ಬಿಸುವದರಿಂದಲೂ, ದೇಶದಲ್ಲಿ ಬಹು ಕ್ರೂರವಾದ ಪಾಪ ಅಪರಾಧಗಳು ಉಂಟಾಗುತ್ತದೆ. ಇದು ಮನೆಗಳಲ್ಲೂ, ಬೀದಿಗಳಲ್ಲೂ, ಜನಸಾಮಾನ್ಯಸ್ಥಳಗಳಲ್ಲೂ, ಶಾಲೆಗಳಲ್ಲೂ, ಜನರ ಗುಂಪಿರುವ ಸ್ಥಳಗಳಲ್ಲೂ, ಮೈದಾನಗಳಲ್ಲೂ, ವಾಸಸ್ಥಳಗಳಲ್ಲೂ, ಶೌಚಲಯಗಳಲ್ಲೂ ತನ್ನ ಕೃತ್ಯವನ್ನು ಎಸಗುತ್ತದೆ. ಅನೇಕ ಕುಟುಂಬಗಳು ಚದರಿಹೋಗುತ್ತವೆ, ದೇಶ ದಿಗ್ಭ್ರಮೆಗೊಳ್ಳುವಂತೆ ಬಹು ಘೋರ ಕೃತ್ಯಗಳು ಉಂಟಾಗುತ್ತದೆ. ಮಕ್ಕಳನ್ನು ಕೊಲೆ ಮಾಡುವಂತ ಪೋಷಕರೂ, ಪೋಷಕರನ್ನು ಕೊಲೆಮಾಡು ಮಕ್ಕಳು ಕೂಡ ಉದ್ಭವಿಸುವರು. ಇದರ ಕೇಡಿಗೆ ವಿರುದ್ಧವಾಗಿ ಎದ್ದು ನಿಲ್ಲಲ್ಲಿಕ್ಕೆ ಆಗದಂತೆ ಸಮಾಜ ತತ್ತರಿಸುತ್ತದೆ. ಇದು ಮುಖ್ಯವಾಗಿ ಭಾರತ ದೇಶದಲ್ಲಿ ತನ್ನ ಕಾರ್ಯವನ್ನು ಮಾಡುವಂತೆ ಬಿಚ್ಚಿಬಿಡಲಾಗಿದೆ.